# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY, RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: 5 ಸಮಿತಿ (ಸಾರ್ವಜನಿಕ ಲೆಕ್ಕಪತ್ರ)

ಪತ್ರಿಕೆಯ ಹೆಸರು : NAME OF THE NEWS PAPER: ಪ್ರಜಾವಾಣಿ ದಿನಾಂಕ : DATE : 12/11/20

# ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಶಾಸಕ ರಾಮಲಿಂಗಾರೆಡ್ಡಿ ಅಧ್ಯಕ್ಷ

ಪ್ರಜಾವಾಣಿ ವಾರ್ತೆ 12-1-20



ರಾಮಲಿಂಗ ರೆಡ್ಡಿ

**ಬೆಂಗಳೂರು:** ವಿಧಾನಮಂಡಲದ ಸಾರ್ವಜನಿಕ ಲೆಕ್ಕಪತ್ರ ಸಮಿತಿ (ಪಿಎಸಿ) ಅಧ್ಯಕ್ಷರಾಗಿ ಹಿರಿಯ ಶಾಸಕ ರಾಮಲಿಂಗಾರೆಡ್ಡಿ ಅವರನ್ನು ನೇಮಕ ಮಾಡಲಾಗಿದೆ.

ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದ ಬಳಿಕ ಎಚ್.ಕೆ. ಪಾಟೀಲ ಅವರು ಪಿಎಸಿ ಅಧ್ಯಕ್ಷರಾಗಿದ್ದರು. 2020-21ನೇ ಸಾಲಿನಲ್ಲಿ ವಿಧಾನಮಂಡಲ ಹಾಗೂ ವಿಧಾನಸಭೆಯ ಎಲ್ಲ ಸಮಿತಿಗಳಿಗೆ ಅಧ್ಯಕ್ಷರು ಹಾಗೂ ಸದಸ್ಯರನ್ನು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ನೇಮಕ ಮಾಡಿದ್ದಾರೆ.

**ಸಮಿತಿಗಳ ಅಧ್ಯಕ್ಷರು:** ಅರವಿಂದ ಲಿಂಬಾವಳಿ-ಸಾರ್ವಜನಿಕ ಉದ್ದಿಮೆಗಳ ಸಮಿತಿ, ಎಸ್. ಅಂಗಾರ-ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ, ದಿನಕರ ಶೆಟ್ಟಿ-ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ, ಕುಮಾರ್ ಬಂಗಾರಪ್ಪ- ಅಧೀನ ಶಾಸನ ರಚನಾ ಸಮಿತಿ, ಸಾ.ರಾ. ಮಹೇಶ-ಕಾಗದಪತ್ರಗಳ ಸಮಿತಿ, ಕೆ. ಪೂರ್ಣಿಮಾ-ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ, ಪಿ. ರಾಜೀವ-ಗ್ರಂಥಾಲಯ ಸಮಿತಿ, ಜಿ. ಸೋಮಶೇಖರ ರೆಡ್ಡಿ-ಸ್ಥಳೀಯ ಸಂಸ್ಥೆ ಮತ್ತು ಪಂಚಾಯತ್ ರಾಜ್ ಸಮಿತಿ.

**ವಿಧಾನಸಭೆಯ ಸಮಿತಿಗಳು:** ಬಸನಗೌಡ ಪಾಟೀಲ ಯತ್ನಾಳ-ಹಕ್ಕುಬಾಧ್ಯತಾ ಸಮಿತಿ, ಅಭಯ ಪಾಟೀಲ-ಅಂದಾಜು ಸಮಿತಿ, ಕೆ. ರಘುಪತಿ ಭಟ್-ಸರ್ಕಾರಿ ಭರವಸೆಗಳ ಸಮಿತಿ.

ಅರ್ಜಿಗಳು, ವಸತಿ ಸೌಕರ್ಯ ಹಾಗೂ ಖಾಸಗಿ ಸದಸ್ಯರ ವಿಧೇಯಕಗಳು ಹೀಗೆ ಮೂರು ಸಮಿತಿಗಳಿಗೆ ಉಪಾಧ್ಯಕ್ಷ ಆನಂದ ಚಂದ್ರಶೇಖರ ಮಾಮನಿ ಅಧ್ಯಕ್ಷರಾಗಿದ್ದಾರೆ.